# ಕರ್ನಾಟಕ ವಿಧಾನ ಪರಿಷತ್ತು

**ನೂರ ಮೂವತ್ತಮೂರನೆಯ ಅಧಿವೇಶನ**

**(ಮುಂದುವರೆದ ಉಪವೇಶನಗಳು)**

**<u>ಕಾರ್ಯಕಲಾಪಗಳ ಪಟ್ಟಿ</u>**

**ಬುಧವಾರ, ದಿನಾಂಕ: 22ನೇ ಮಾರ್ಚ್, 2017**

**(ಸಮಯ: ಬೆಳಗ್ಗೆ 11.00 ಗಂಟೆಗೆ)**

******

## 01. ಪ್ರಶ್ನೋತ್ತರ

ಅ. ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು : ಒಂಭತ್ತನೆಯ ಪಟ್ಟಿ

ಆ. **<u>ತಡೆಹಿಡಿಯಲಾದ ಪ್ರಶ್ನೆಗಳು:</u>**

ಏಳನೇ ಪಟ್ಟಿಯಿಂದ ತಡೆಹಿಡಿಯಲಾದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 100(842) } **ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು**

ಇ. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು : ಒಂಭತ್ತನೆಯ ಪಟ್ಟಿ

## 02. ಗಮನ ಸೆಳೆಯುವ ಸೂಚನೆಗಳು

ಅ) **ಶ್ರೀ ರಿಜ್ವಾನ್ ಅರ್ಷದ್** ಅವರು 2016-17ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯದಲ್ಲಿ 'ಕಲ್ಯಾಣ ಕಾರ್ಯಕ್ರಮಗಳು' ಯೋಜನೆಗಾಗಿ ಮೀಸಲರಿಸಿದ ಹಣವನ್ನು ಉಪಯೋಗಿಸಿಕೊಳ್ಳದಿರುವ ಬಗ್ಗೆ **ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರ** ಗಮನ ಸೆಳೆಯುವುದು.

ಆ) **ಶ್ರೀ ಕೋಟಾ ಶ್ರೀನಿವಾಸ ಪೂಜಾರಿ** ಅವರು ಕರಾವಳಿಯ ಮೀನುಗಾರರಿಗೆ ವಿವಿಧ ಸೌಲಭ್ಯಗಳನ್ನು ಒದಗಿಸದಿರುವುದರಿಂದ ದೋಣಿ ಅವಗಡಗಳು ಸಂಭವಿಸಿರುವ ಬಗ್ಗೆ **ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕಾ ರಾಜ್ಯ ಸಚಿವರ** ಗಮನ ಸೆಳೆಯುವುದು.

## 03. ನಿಯಮ 330ರ ಮೇರೆಗೆ

ಅ) **ಶ್ರೀ ಬಸವರಾಜ ಹೊರಟ್ಟಿ** ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನ ಜೋಡಳ್ಳಿಯ ಅನುದಾನಿತ ಸಂಗಮೇಶ್ವರ ಪ್ರೌಢಶಾಲೆಯಲ್ಲಿ ಹೊರಗಿನವರು ಬಂದು ಮುಖ್ಯೋಪಾಧ್ಯಾಯರು ಹಾಗೂ ಸಿಬ್ಬಂದಿಗಳ ಮೇಲೆ ಗುಂಡಾಗಿರಿ ಮಾಡಿರುವ ಪರಿಣಾಮ ಕಳೆದ ಎಂಟು ತಿಂಗಳಿನಿಂದ ಪಾಠಗಳು ನಡೆಯದೆ ಅಲ್ಲಿನ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವ ಬಗ್ಗೆ ಪ್ರಸ್ತಾಪಿಸುವುದು. **(ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು)**

ಆ) **ಶ್ರೀಮತಿ ತಾರಾಅನೂರಾಧ ಹಾಗೂ ಕ್ಯಾಪ್ಟನ್ ಗಣೇಶ್ ಕಾರ್ಣಿಕ್** ಅವರು ಇತ್ತೀಚಿಗೆ ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಸಾರ್ವಜನಿಕರ ವೈಯಕ್ತಿಕ ಬದುಕು ಸಂಗತಿಗಳ ಬಗ್ಗೆ ಅತಿ ಹೆಚ್ಚಾಗಿ ಪ್ರಸಾರ ಮಾಡುತ್ತಿರುವುದರಿಂದ ಸಮಾಜದ ಮೇಲೆ ದುಷ್ಪರಿಣಾಮ ಬೀರುತ್ತಿರುವುದನ್ನು ತಡೆಗಟ್ಟಲು ಮಾಧ್ಯಮಗಳ ಮೇಲೆ ನಿರ್ಭಂಧ ಹೇರುವ ಬಗ್ಗೆ ಪ್ರಸ್ತಾಪಿಸುವುದು. **(ಮಾನ್ಯ ಮುಖ್ಯಮಂತ್ರಿಗಳು)**

## 04. ವಿತ್ತೀಯ ಕಾರ್ಯಕಲಾಪ

2017-2018ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ.

(ಐದನೇ ದಿನ)

**ಶ್ರೀನಿವಾಸ**
**ಕಾರ್ಯದರ್ಶಿ**

---

ಪ್ರತಿ ದಿನದ ವಿಧಾನ ಪರಿಷತ್ತಿನ ಕಾರ್ಯಕಲಾಪಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿಯೂ ಸಹ ಪಡೆದುಕೊಳ್ಳಬಹುದು.
**www.kla.kar.nic.in/council.htm**